ಕೈಗಾರಿಕಾ ಶೆಡ್‌ಗಳು

660 (830) ಶ್ರೀ ಮುನಿರಾಜು. ಎಸ್ (ದಾಸರಹಳ್ಳಿ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆಐಎಡಿಬಿ ವತಿಯಿಂದ ಫೀಣ್ಯ 2ನೇ ಹಂತದಲ್ಲಿ ಎಷ್ಟು ಕೈಗಾರಿಕಾ ಶೆಡ್‌ಗಳನ್ನು ಮಂಜೂರು ಮಾಡಲಾಗಿದೆ;

ಆ) ಕೈಗಾರಿಕಾ ಶೆಡ್‌ಗಳನ್ನು ಮಂಜೂರು ಮಾಡುವಾಗ ಬಡಾವಣೆಯ ಅವಶ್ಯಕತೆಗೆ ಬೇಕಾಗುವ ಬಸ್ ನಿಲ್ದಾಣ, ರಸ್ತೆ, ಮುಂತಾದ ಸೌಲಭ್ಯಗಳಿಗೆ ಸ್ಥಳವನ್ನು ಕಾಯ್ದಿರಿಸಲಾಗಿದೆಯೇ (ಸ್ಥಳಗಳು ಹಾಗೂ ವಿಸ್ತೀರ್ಣದ ವಿವರ ನೀಡುವುದು);

ಇ) ಕಾಯ್ದಿರಿಸಿದ್ದಲ್ಲಿ, ಸದರಿ ಉದ್ದೇಶಕ್ಕಾಗಿ ಉಪಯೋಗಿಸ ಲಾಗಿದೆಯೇ?

ಶ್ರೀ ಮುರುಗೇಶ್ ಆರ್. ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) ಕೆಐಎಡಿಬಿ ವತಿಯಿಂದ ಫೀಣ್ಯ 2ನೇ ಹಂತದಲ್ಲಿ ಕೈಗಾರಿಕಾ ಶೆಡ್‌ಗಳನ್ನು ನಿರ್ಮಾಣ ಮಾಡಿರುವುದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಹುಣಸೂರು ತಾಲ್ಲೂಕಿನ ಕೈಗಾರಿಕಾ ಪ್ಲಾಟ್‌ಗಳು

657 (837) ಶ್ರೀ ಮಂಜುನಾಥ್ ಹೆಚ್.ಪಿ. (ಹುಣಸೂರು) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕಿನಲ್ಲಿ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಕೈಗಾರಿಕೆ ಅಭಿವೃದ್ಧಿಗಾಗಿ ಸ್ವಾಧೀನಪಡಿಸಿ ಕೊಂಡಿರುವ ಜಮೀನು ಎಷ್ಟು (ಗ್ರಾಮ, ಮಾಲೀಕರ ಹೆಸರು, ಸರ್ವೆ ನಂಬರ್, ವಿಸ್ತೀರ್ಣವಾರು ವಿವರ ನೀಡುವುದು)?

ಆ) ಸ್ವಾಧೀನಪಡಿಸಿಕೊಂಡಿರುವ ಜಮೀನುಗಳ ಪೈಕಿ, ಅಭಿವೃದ್ಧಿ ಪಡಿಸಿ, ನಿರ್ಮಿಸಿರುವ ಕೈಗಾರಿಕಾ ನಿವೇಶನಗಳ ಸಂಖ್ಯೆ ಎಷ್ಟು ಮತ್ತು ಎಂದು ನಿರ್ಮಿಸಲಾಯಿತು?

ಇ) ಸದರಿ ನಿವೇಶನಗಳನ್ನು ಯಾರಿಗೆ ಯಾವ ಮಾನದಂಡವನ್ನು ಅನುಸರಿಸಿ ಹಂಚಲಾಗಿದೆ (ವಿವರ ನೀಡುವುದು)?

ಈ) ಸರ್ವೆ ಸಾಮಾನ್ಯವಾಗಿ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ ನಿವೇಶನಗಳನ್ನು (ಕೈಗಾರಿಕಾ ನಿವೇಶನ) ಹಂಚಿಕೆ ಮಾಡಲು ಇರುವ ವಿಧಾನಗಳು ಹಾಗೂ ನಿಯಮಗಳೇನು (ವಿವರ ನೀಡುವುದು)?

ಉ) ಸದರಿ ನಿಯಮಗಳಂತೆ ಹುಣಸೂರು ತಾಲ್ಲೂಕಿನಲ್ಲಿ ಕೈಗಾರಿಕೆ ನಿವೇಶನಗಳನ್ನು ಹಂಚಿಕೆ ಮಾಡಲಾಗಿರುವುದೇ?

ಊ) ಕೈಗಾರಿಕಾ ನಿವೇಶನಗಳನ್ನು ಶೈಕ್ಷಣಿಕ ಪ್ರದೇಶದ ಹತ್ತಿರ ನಿರ್ಮಾಣ ಮಾಡಲಾಗಿದೆಯೇ?

ಶ್ರೀ ಮುರುಗೇಶ್ ಆರ್. ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕಿನಲ್ಲಿ ಮಂಡಳಿಯ ವತಿಯಿಂದ ಕೈಗಾರಿಕಾ ಪ್ರದೇಶ ಅಭಿವೃದ್ಧಿಗಾಗಿ ಜಮೀನು ಸ್ವಾಧೀನ ಪಡಿಸಿಕೊಂಡಿರುವುದಿಲ್ಲ.

ಆ) ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಹುಣಸೂರು ತಾಲ್ಲೂಕಿನಲ್ಲಿ ಯಾವುದೇ ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿ ಪಡಿಸಿರುವುದಿಲ್ಲ. ಆದ್ದರಿಂದ ಅಭಿವೃದ್ಧಿಪಡಿಸಿ ಕೈಗಾರಿಕಾ ನಿವೇಶನಗಳನ್ನು ನಿರ್ಮಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಹುಣಸೂರು ತಾಲ್ಲೂಕಿನಲ್ಲಿ ಯಾವುದೇ ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿ ಪಡಿಸಿರುವುದಿಲ್ಲ. ಹಾಗೂ ಹಂಚಿಕೆ ಮಾಡಿರುವುದಿಲ್ಲ.

ಈ) ಕೆ.ಐ.ಎ.ಡಿ.ಬಿ.ಯಿಂದ ಸಾಮಾನ್ಯವಾಗಿ ಸರ್ಕಾರವು ರಚಿಸಿರುವ ಈ ಕೆಳಕಂಡ ಸಮಿತಿಗಳ ಶಿಫಾರಸ್ಸಿನನ್ವಯ ಕೈಗಾರಿಕಾ ನಿವೇಶನಗಳನ್ನು ಹಂಚಿಕೆ ಮಾಡಲಾಗುವುದು.

1. ರಾಜ್ಯ ಉನ್ನತ ಮಟ್ಟದ ಸಮಿತಿ ಸಭೆ ರೂ. 50–00 ಕೋಟಿ ಹೆಚ್ಚಿನ ಬಂಡವಾಳ ಹೂಡುವ ಘಟಕಗಳು.

2. ರಾಜ್ಯಮಟ್ಟದ ಏಕಗವಾಕ್ಷಿ ಸಮಿತಿ ಸಭೆಯಲ್ಲಿ ರೂ. 3–00 ಕೋಟಿ ಮೇಲ್ಪಟ್ಟು ಹಾಗೂ ರೂ. 50–00 ಕೋಟಿಯೊಳಗಿನ ಬಂಡವಾಳ ಹೂಡುವ ಯೋಜನೆಗಳು.
3. ಜಿಲ್ಲಾಮಟ್ಟದ ಏಕಗವಾಕ್ಷಿ ಸಭೆ, ಮಂಡಳಿಯ ಹಂಚಿಕೆ ಸಮಿತಿ ಸಭೆಯಲ್ಲಿ ಸಣ್ಣ ಕೈಗಾರಿಕಾ ಘಟಕಗಳ ಉದ್ದಿಮೆದಾರರಿಗೆ ಹಂಚಿಕೆ ಮಾಡಲಾಗುವುದು.

ನಿವೇಶನ ಹಂಚಿಕೆ ಮಾಡಲು ರೂಪಿಸಿರುವ ನಿಯಮಗಳನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ.

ಊ) ಹುಣಸೂರು ತಾಲ್ಲೂಕಿನಲ್ಲಿ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಪಡಿಸಿಲ್ಲವಾದುದರಿಂದ ನಿವೇಶನಗಳನ್ನು ಹಂಚಿಕೆ ಮಾಡುವ ಕ್ರಮ ಉದ್ಭವಿಸುವುದಿಲ್ಲ.

ಋ) ಪ್ರಶ್ನೆ ಉದ್ಭವಿಸುವುದಿಲ್ಲ.

ಅನುಬಂಧ – I

ALLOTMENT NORMS

The Board in its meeting dated 6.12.2005 further resolved to stipulate following norms for allotment of land in Bangalore District and District Land Allotment Committees will be requested to follow the same norms while recommending allotment of lands to small scale industries in their respective Districts as below:

1. The extent of land to be allotted by the Committee constituted, to small-scale industries with investment of less than Rs.3.00 crores, should not exceed 1.00 acre in Bangalore Urban District and 2.00 acres in Bangalore Rural District.
2. The extent of land to be allotted to an SSI unit, shall not be more than 4 times the built-up area indicated in the prescribed application in respect of Industrial Areas in Bangalore, Mysore and Dakshina Kannada and 8 times in other Districts.

3. The maximum built-up area that an applicant can reserve for future expansion shall not exceed 100% of the initial built-up area proposed for construction.
4. Critical scrutiny of investment on buildings be made, with reference to the built-up area indicated, taking into consideration the prevailing market rates of the construction materials for the nature of construction proposed, to ensure realistic project proposals.
5. To stipulate a condition to the SSI units engaged in manufacturing of chemical and pollution causing activities, to obtain KSPCB clearances before commencement of production.
6. Preference in allotment of land be given to:

   - ❖ Projects proposed by Diploma/Engineering Graduates.
   - ❖ Entrepreneurs belonging to SC/ST Community.
   - ❖ Export oriented units.
   - ❖ SSI units engaged in manufacturing of import substitute items to be certified by the Dept. of I&C /VITC.
   - ❖ Shifting and expansion of an existing unit.
   - ❖ Local women entrepreneurs.

It was further decided to send suitable proposals to the Government for amending Regulation-7 of the KIADB Regulations for disposal of land- 1969, incorporating the above norms.

******